

ಡೆನಿಮ್ ಉಡುಪು 'ಎವರ್‌ಗ್ರೀನ್ ಫ್ಯಾಷನ್' ಎನಿಸಿದೆ. ಚಳಿಗಾಲಕ್ಕಂತೂ ಹೇಳಿ ಮಾಡಿಸಿದ ಉಡುಗೆ ಇದು. ಡೆನಿಮ್ ಸ್ಕರ್ಟ್, ಜಾಕೆಟ್, ಪ್ಯಾಂಟ್, ಕುರ್ತಾ ಎಲ್ಲವೂ ಫ್ಯಾಷನ್‌ಗೂ, ದೇಹದ ರಕ್ಷಣೆಗೂ ಸೈ ಎನಿಸಿವೆ.



# ಕಾಲಾತೀತ ಡೆನಿಮ್ ಉಡುಗೆ

■ ಕವಿತಾ ವಿನು ಭಟ್ಟ

ಉಡುಪುಗಳಲ್ಲಿ ಅದೆಷ್ಟೇ ಸಾವಿರ ವಸ್ತ್ರಗಳು ಬಂದರೂ ಸರ್ವಕಾಲಕ್ಕೂ ಸಲ್ಲುವ ಡೆನಿಮ್ ಬಟ್ಟೆ ಎವರ್ ಗ್ರೀನ್. ಕಾಲಾತೀತವೆನಿಸುವ ಡೆನಿಮ್ ಉಡುಪು ಫ್ಯಾಷನ್ ಟ್ರೆಂಡ್ ಸೃಷ್ಟಿಸಿದೆ. ಎಲ್ಲ ಋತುಮಾನಕ್ಕೂ ಸಲ್ಲುವ ಡೆನಿಮ್ ಯುವಕ ಯುವತಿಯರ ಹಾರ್ಟ್ ಫೇವರೆಟ್ ಉಡುಪು ಎನಿಸಿದೆ.

ಫ್ಯಾಷನ್ ದುನಿಯಾದಲ್ಲಿ ಡೆನಿಮ್ ಜೀನ್ಸ್ ಜನಪ್ರಿಯಗೊಂಡಿದೆ. ನೀಲಿ ಬಣ್ಣದ ಶೇಡ್‌ಗಳಲ್ಲಿ ಹೆಚ್ಚಾಗಿ ಕಾಣಸಿಗುವ ಡೆನಿಮ್ ಪ್ಯಾಂಟ್, ಶರ್ಟ್, ಸ್ಕರ್ಟ್‌ಗಳಿಗಷ್ಟೇ ಅಲ್ಲದೆ ಚಳಿಯಿಂದ ರಕ್ಷಣೆ ಪಡೆಯುವ ಜಾಕೆಟ್ ಕೂಡ ಫ್ಯಾಷನ್‌ಪ್ರಿಯರ ಮನಗೆಲ್ಲುತ್ತಿದೆ.

ಜೀನ್ಸ್ ಬಟ್ಟೆಯಿಂದ ಆಭರಣ ತಯಾರಿಸುವ ಬಗ್ಗೆಯೂ ಪ್ರಯೋಗಗಳು ನಡೆಯುತ್ತಿರುವ ಬೆನ್ನಲ್ಲೇ ಡೆನಿಮ್ ಬಟ್ಟೆಗಳಲ್ಲಿಯ ವೈವಿಧ್ಯತೆಗಳ ಬಗ್ಗೆ ಒಂದು ಕಿರುನೋಟ ಇಲ್ಲಿದೆ.

## ಡೆನಿಮ್ ಪ್ಯಾಂಟ್

ಸಾಮಾನ್ಯವಾಗಿ ಎಲ್ಲರ ಸಂಗ್ರಹದಲ್ಲಿಯೂ ಶಾಶ್ವತ ಸ್ಥಾನ ಗಿಟ್ಟಿಸಿರುವ ಜೀನ್ಸ್ ಪ್ಯಾಂಟ್ ಜನಮೆಚ್ಚುಗೆ ಗಳಿಸಿದೆ. ರಿಪ್ಡ್